

ಚಾಕೊಲೇಟ್ ಸ್ಪಾ ಆಯಿತು. ಈಗ ಚಾಕೊಲೇಟ್ ಕುಸ್ತಿ ಸ್ಪರ್ಧೆ. ಅದೂ ಮಹಿಳೆಯರಿಗೆ. ಎಲ್ಲಾ ಕಡೆ ಆರ್ಥಿಕ ಮುಗ್ಗಟ್ಟಿನಿಂದ ಮುಗ್ಗರಿಸುತ್ತಿದ್ದಾರಲ್ಲ. ದುಬಾರಿ ಚಾಕೊಲೇಟ್ ಕೊಳ್ಳುವವರೇ ಇಲ್ಲವಂತೆ. ಖರ್ಚಾಗದ ಮಾಲನ್ನು ಈ ರೀತಿ ಮೈಗೆ ಸವರಿ ಪ್ರೇಕ್ಷಕರನ್ನು ಸೆಳೆಯುವ ಕಂಪೆನಿಯವರ ತಂತ್ರಕ್ಕೆ ಭೇಷ್ ಎನ್ನಲೇಬೇಕು!

ಕಡಲ ತಡಿಯ ಅಕ್ಟೋಪಸ್‌ಗೂ ಐಷಾರಾಮಿ ಬದುಕಿನ ಆಸೆ. ತಣ್ಣನೆ ನೀರಿನಲ್ಲಿ ಈಜಾಡಿಕೊಂಡಿದ್ದ ಈ ಅಕಶೇರುಕ ತೆಂಗಿನ ಚಿಪ್ಪನ್ನು ಆಯ್ದು ಮನೆ ಕಟ್ಟಿಕೊಂಡಿದೆ. ಇಂಡೋನೇಷ್ಯಾ ಸಾಗರದ ತಳದಲ್ಲಿ ಕಂಡು ಬಂದಿರುವ ವಿಚಿತ್ರ ಆದರೂ ನಿಜ ಸಂಗತಿಯಿದು. ಬೆಂಗಳೂರಿನಲ್ಲಿ ಇಂಚಿಂಚು ಭೂಮಿಗೂ ಮಾನವರ ಗುದ್ದಾಟದ ಚಟ ಕಡಲಾಳದ ಜೀವಿಗಳಿಗೂ ಅಂಟಿಕೊಂಡಿದ್ಯಾಕೊ!





ಅಮೆರಿಕದ ಆ್ಯಂಡ್ರೂ ಕಡಲ ದಂಡೆಯಲ್ಲಿ ವಿಹಾರ ಹೋಗುತ್ತಿದ್ದ. ಮೊಬೈಲ್ ಆಕಸ್ಮಿಕವಾಗಿ ನೀರಿಗೆ ಬಿದ್ದು ಕ್ಷಣಾರ್ಧದಲ್ಲಿ ಮಾಯ. ಮೊಬೈಲ್ ಆಸೆ ಬಿಟ್ಟ ಆ್ಯಂಡ್ರೂ. ಆದರೆ ಆತನ ಗೆಳತಿಗೆ ವಾರದ ನಂತರ ಮೀನುಗಾರನೊಬ್ಬನಿಂದ ಫೋನ್ ಕರೆ. ಮೀನಿನ ಹೊಟ್ಟೆಯಲ್ಲಿದ್ದ ಮೊಬೈಲ್ ಸುಸ್ಥಿತಿಯಲ್ಲಿತ್ತು. ಆದರೆ ಮೊಬೈಲ್ ಇರುವುದು ಗೆಳೆಯ/ ಗೆಳತಿಗೆ ಫೋನ್, ಎಸ್ಸೆಮ್ಮೆಸ್ ಮಾಡಲು, ತಿನ್ನುವುದಕ್ಕೆ ಅಲ್ಲ ಎಂಬ ತಲೆ ದಡ್ಡ ಮೀನಿಗಿಲ್ಲ.

ಲಂಡನ್ನಿನಲ್ಲಿ ಬಿಸಿ ದೋಸೆಯಂತೆ ಖರ್ಚಾಗುತ್ತಿರುವ ಕ್ರಿಸ್ಮಸ್ ಉಡುಗೊರೆ ಯಾವುದು ಗೊತ್ತೇ? 'ವಿವಾಹ ವಿಚ್ಛೇದನ ಪಡೆಯುವುದು ಹೇಗೆ' ಎಂಬ ಕಾನೂನು ಸಲಹೆ ನೀಡುವ ಪುಸ್ತಕ. ನಿತ್ಯ ಕದನ ಮಾಡುತ್ತಿರುವ ದಂಪತಿಗೆ ಅವರವರ ಗೆಳೆಯ/ ಗೆಳತಿಯರು ಇದನ್ನು ಉಡುಗೊರೆಯಾಗಿ ನೀಡುತ್ತಿದ್ದಾರಂತೆ. ಪುಸ್ತಕ ಹೊರತಂದಿರುವ ಕಂಪೆನಿ ಮರುಮುದ್ರಣಕ್ಕೆ ಸಜ್ಜಾಗಿದೆಯಂತೆ. ಮುಂದಿನ ವರ್ಷದ ಉಡುಗೊರೆ 'ಮರುವಿವಾಹ ಆಗುವುದು ಹೇಗೆ?' ಎಂಬ ಪುಸ್ತಕವಿರಬಹುದೇ?



ಲಂಡನ್ನಿನ ಹೀಥ್ರೂ ವಿಮಾನ ನಿಲ್ದಾಣದಲ್ಲಿ ಮೂರು ವರ್ಷಗಳ ಹಿಂದೆ ತೆಗೆದ ಚಿತ್ರವಿದು. ಪಾಪ! ಕುರ್ಚಿ ಡಯಟ್ ಮಾಡಿ ಸಣ್ಣಗಾಗಿದ್ದು ಈ ಧಡೂತಿಗೆ ಹೇಗೆ ಗೊತ್ತಾಗಬೇಕು? ಈಗ ಮತ್ತದೇ ಚಿತ್ರಕ್ಕೆ ಮತ್ತೆ ಮತ್ತೆ ಮುಖ (?) ತೋರಿಸಲಿಷ್ಟವಂತೆ. ಅಂತರ್ಜಾಲಗಳಲ್ಲಿ ಮಾತ್ರವಲ್ಲ, ರಾಯ್ಟರ್ಸ್ ಕೂಡಾ ಹಾಕಿಕೊಂಡಿದೆ.

ನ್ಯೂಯಾರ್ಕ್‌ನಲ್ಲಿ 'ಫ್ರೀಡಂ ಸೈಕಲ್ ರ್‍ಯಾಲಿ' ನಡೆಯಲಿದೆ. ಇದು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದಕ್ಕಲ್ಲ. ಉಡುಪಿನಿಂದ ಸ್ವಾತಂತ್ರ್ಯ ಪಡೆಯಲು. ಜ್ಯೂಗಳು ವಾಸಿಸುವ ರಸ್ತೆಗಳಲ್ಲಿ ಸೈಕಲ್ ಸವಾರಿ ನಿಷೇಧಿಸಲಾಗಿದೆಯಂತೆ. ಕಾರಣ ಅರೆಬರೆ ಉಡುಪು ಧರಿಸಿ ಸೈಕಲ್ ಸವಾರಿ ಮಾಡುವ ಯುವತಿಯರು! ಈಗ ಪ್ರತಿಭಟನೆ ಅರೆಬರೆಯಿಂದ ಪೂರ್ಣ ಉಡುಪಿಗಲ್ಲ, ದೇಹಕ್ಕಿಳಿದಿದೆ.

ಬ್ರೆಜಿಲ್‌ನ 2 ವರ್ಷದ ಮಗುವಿನ ದೇಹದಲ್ಲಿ ಡಜನ್‌ಗಟ್ಟಲೆ ಸೂಜಿಗಳು. ಮಲತಂದೆ ಬಟ್ಟೆ ಹೊಲಿಯಲು ಬಳಸುವ ಸೂಜಿಗಳನ್ನು ಡಬ್ಬಿಯ ಬದಲು ಮಗುವಿನ ಮೈ ಒಳಗೆ ತುರಿಸಿದ್ದ. ಈಗ ಜೈಲಿನ ಕೈದಿಗಳ ಬಟ್ಟೆ ಹೊಲಿಯಲು ಸೂಜಿ ಸಾಲ ಕೇಳುತ್ತಿದ್ದಾನಂತೆ.

